ಅಧ್ಯಕ್ಷರು : ಆಯಿತು, ತಮ್ಮ ಇನ್ನೊಂದು ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೇನೆ. ಈಗ ಲಿಖಿತ ಮೂಲಕ ಉತ್ತರರಿಸುವ ಪ್ರಶ್ನೆಗಳು.

4. (ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 14.03.2011ರ 11ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 72 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳ ಉತ್ತರಗಳನ್ನು ಹಾಗೂ...

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಸಚಿವರೆ, ಒಂದು ನಿಮಿಷ ಸಾರ್, ಲಿಖಿತ ಉತ್ತರಗಳು ಬಂದಿರುವುದರಲ್ಲಿ ಇಲ್ಲಿ ಬಹಳಷ್ಟು ಉತ್ತರಗಳೇ ಇಲ್ಲ. ಇದು ಪ್ರಿಂಟಾಗಿ ಬರುತ್ತದೆ, ಉತ್ತರ ಕೊಡುವುದರಲ್ಲಿ ಇರುವುದೇ ಇಲ್ಲ. ಬಹಳಷ್ಟು ಮಿಸ್ ಆಗುತ್ತಿದೆ. ಪ್ರತಿ ಸಾರಿಯೂ ಮಿಸ್ ಆಗುತ್ತಿದೆ. ಇದನ್ನು ದಯವಿಟ್ಟು ಗಮನಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಇಲ್ಲಾ ನಾವು adjust ಮಾಡುತ್ತೇವೆ. ದಿನಾಂಕ: 10.03.2011ರ 09ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 102 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ: 11.03.2011ರ 10ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 07 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 23 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ–1)

ಅಧ್ಯಕ್ಷರು : ಮಂಡಿಸಲಾಯಿತು. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

5. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಸನ್ಮಾನ್ಯ ಸಭಾಧ್ಯಕ್ಷರೆ, ಅ) ಭಾರತ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ

ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ (ಆ) ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳು (ಅ) ಸಿವಿಲ್, (ಇ) ರಾಜಸ್ವ ಸ್ವೀಕೃತಿಗಳು ಹಾಗೂ (ಈ) ವಾಣಿಜ್ಯ ವರದಿಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ಸದನವನ್ನು 4.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ 2 ಗಂಟೆ 48 ನಿಮಿಷಕ್ಕೆ ಮುಕ್ತಾಯಗೊಂಡು ಭೋಜನ ವಿರಾಮದ ನಂತರ 4.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸಭೆಯು ಪುನ: ಸಂಜೆ 4 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

(i) **ವಿಷಯ: ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ, ನಿರ್ಗತಿಕ ವೇತನ, ಅಂಗವಿಕಲರ ವೇತನಕ್ಕೆ ಸಂಬಂಧಿಸಿದಂತೆ ದಿನಾಂಕ 11.02.2011ರ ಸರ್ಕಾರದ ಸುತ್ತೋಲೆಯನ್ನು ಮಾರ್ಪಾಡು ಮಾಡುವ ಬಗ್ಗೆ.**

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸಂಧ್ಯಾ ಸುರಕ್ಷ, ವೃದ್ಧಾಪ್ಯ ವೇತನ, ನಿರ್ಗತಿಕ ವೇತನ, ಅಂಗವಿಕಲರ ವೇತನವನ್ನು ಇತ್ತೀಚೆಗೆ ದಿನಾಂಕ 11.02.2011ರಲ್ಲಿ ಸರ್ಕಾರ ಆದೇಶ ಹೊರಡಿಸಿ ಭೌತಿಕ ಪರಿಶೀಲನೆಯಾಗುವವರೆಗೆ ಇದನ್ನು ಮುಂದೂಡಿ, ಅಲ್ಲಿಯವರೆಗೆ ಯಾವುದೇ ಹೊಸದಾಗಿ ಸಂಧ್ಯಾ ಸುರಕ್ಷ, ವೃದ್ಧಾಪ್ಯ ವೇತನ, ನಿರ್ಗತಿಕ ವೇತನ, ಅಂಗವಿಕಲರ ವೇತನವನ್ನು ಮಂಜೂರು ಮಾಡಬಾರದು ಎಂದು ತಿಳಿಸಿದ್ದಾರೆ. ಎಲ್ಲೆಲ್ಲಿ ವ್ಯತ್ಯಾಸವಾಗಿದೆ ಅದನ್ನು ಸರಿಪಡಿಸಲು ನಮ್ಮದೇನು ಅಭ್ಯಂತರವಿಲ್ಲ. ಆದರೆ ಬಡವರಿಗೆ ಇದನ್ನು ತಡೆಹಿಡಿದಿರುವುದರಿಂದ ಕಷ್ಟವಾಗಿದೆ. ಬಹುಶ: ನಿರ್ಗತಿಕರಿಗೆ ಕೊಡುವಂಥ